• ಶ್ರೀ ಬಿ.ಎಸ್. ಯಡಿಯೂರಪ್ಪ : ಪ್ರಶ್ನೋತ್ತರ ವೇಳೆಯನ್ನು ಸಸ್ಪೆಂಡ್ ಮಾಡಿ, ಚರ್ಚೆಮಾಡೋಣ. ಒಂದು ಗಂಟೆ ಆದಮೇಲೆ ನಮಗೆ ಉತ್ತರ ಕೊಡಿ.

(ಗೊಂದಲ)

ಶ್ರೀ ಮಾಟಾಳ್ ನಾಗರಾಜ್ : ಈಗ ಚರ್ಚೆ ಪ್ರಾರಂಭವಾಗಲಿ.

ಶ್ರೀ ಕಾಗೋಡು ತಿಮ್ಮಪ್ಪ : ನಮಗೆ ಟೈಂ ಬೇಡವೇ?

ಅಧ್ಯಕ್ಷರು : ಕಾಗೋಡು ತಿಮ್ಮಪ್ಪನವರೇ ತಾವು ಕುಳಿತುಕೊಳ್ಳಿ. ನಾನು ಅವರಿಗೆ ಹೇಳಿದ್ದೇನೆ. ನೀವು ಏತಕ್ಕೆ ಅವರಿಗೆ ಉತ್ತರ ಕೊಡುತ್ತೀರಿ?

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಹಿಂದುಳಿದವರ್ಗಗಳ ಹೆಸರನ್ನು ಹೇಳಿಕೊಂಡು ಮಂತ್ರಿಯಾಗಿ ಇವರು ಮುಂದುವರಿಯುತ್ತಿದ್ದಾರೆ. ಆದರೆ ಹಿಂದುಳಿದ ವರ್ಗದವರಿಗೆ ಇವರು ಅನ್ಯಾಯ ಮಾಡುತ್ತಿದ್ದಾರೆ. ಇದು ರಾಜ್ಯದ ಜನರಿಗೆ ಗೊತ್ತಾಗಲಿ.

(ಗೊಂದಲ)

(ಮಾನ್ಯ ಬಿ.ಎಸ್. ಯಡಿಯೂರಪ್ಪನವರು ತಮ್ಮ ಸ್ಥಾನ ಬಿಟ್ಟು ಸಭಾಧ್ಯಕ್ಷರ ಪೀಠದ ಬಳಿ ನಿಂತು ಮಾತನಾಡುತ್ತಿದ್ದರು. ನಂತರ ಸಭಾತ್ಯಾಗ ಮಾಡಿದರು.)

(ಗೊಂದಲ)

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಮೈಸೂರು ಜಿಲ್ಲೆಯ ಕೊಳ್ಳೇಗಾಲದ ತಾಲ್ಲೂಕಿನಲ್ಲಿ ಅಕ್ರಮ ಸಾಗುವಳಿ ಪ್ರದೇಶದ ವಿಸ್ತೀರ್ಣ

149 - ಶ್ರೀ ಬಿ. ರಾಜುಗೌಡ (ಹನ್ನೂರು) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮೈಸೂರು ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನ ದಂಟಳ್ಳಿ ಕಾಯ್ದಿಟ್ಟ ಅರಣ್ಯ ಪ್ರದೇಶದಲ್ಲಿ ಅಕ್ರಮವಾಗಿ ಸಾಗುವಳಿ ಮಾಡುತ್ತಿರುವ ಪ್ರದೇಶ ಎಷ್ಟು?*

ಆ) *ಇದು ಯಾವಾಗಿನಿಂದ ಈ ರೀತಿಯ ಅಕ್ರಮ ಸಾಗುವಳಿ ನಡೆಯುತ್ತಿದೆ?*

ಇ) *ಈ ಬಗ್ಗೆ ಸರ್ಕಾರದ ಗಮನಕ್ಕೆ ನಾಲ್ಕಾರು ಸಾರಿ ತಂದಿದ್ದರು ಸರ್ಕಾರ ನಿಷ್ಕ್ರೀಯವಾಗಿರಲು ಕಾರಣವೇನು?*

ಶ್ರೀ ಹೆಚ್. ವಿಶ್ವನಾಥ್ (ಅರಣ್ಯ ಸಚಿವರು) :

ಅ) ಅನಧಿಕೃತ ಸಾಗುವಳಿ ಮಾಡುತ್ತಿರುವ ಪ್ರದೇಶದ ವಿಸ್ತೀರ್ಣ 785.87 ಎಕರೆ.

ಆ) 1989-90 ರಿಂದಲೂ ಈ ರೀತಿಯ ಸಾಗುವಳಿ ನಡೆಯುತ್ತಿದೆ.

ಇ) ಸರ್ಕಾರದಿಂದ ಅಕ್ರಮ ಒತ್ತುವರಿ ಮಾಡಿರುವವರನ್ನು ಒಕ್ಕಲೆಬ್ಬಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಈ ಉದ್ದೇಶಕ್ಕಾಗಿ ಪ್ರತ್ಯೇಕ ಪೊಲೀಸ್ ಸಿಬ್ಬಂದಿಯನ್ನು ಒದಗಿಸುವ ಪ್ರಸ್ತಾವನೆ ಕೂಡ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಶ್ರೀ ಜಿ. ರಾಜುಗೌಡ : ಮಾನ್ಯ ಅಧ್ಯಕ್ಷರೆ, ಸತತವಾಗಿ 6 ವರ್ಷಗಳಿಂದ ಅಕ್ರಮವಾಗಿ ಸಾಗುವಳಿ ಮಾಡುವವರನ್ನು ತೆರವು ಮಾಡಿಸಬೇಕೆಂದು ಅನೇಕ ಸಾರಿ ಅನೇಕ ವಿಧದಲ್ಲಿ ಸರ್ಕಾರದ ಗಮನವನ್ನು ಸೆಳೆದಿದ್ದೇನೆ. ನಿಯಮ 334ರ ಪ್ರಕಾರ, ಗಮನ ಸೆಳೆಯುವ ಸೂಚನೆ ಪ್ರಕಾರ ಮತ್ತು ಕಾಗದ ಬರೆಯುವುದರ ಮುಖಾಂತರ

ಕಾದಿಟ್ಟ ಅರಣ್ಯ ಪ್ರದೇಶದಲ್ಲಿ ಅಕ್ರಮ ಸಾಗುವಳಿ ನಡೆಯುತ್ತಿದೆ, ಇದನ್ನು ತೆರವು ಮಾಡಬೇಕೆಂದು ಅನೇಕ ವಿಧದಲ್ಲಿ ಸರ್ಕಾರವನ್ನು ಕೇಳಿದ್ದೇನೆ. ಬಹುಶಃ ಸರ್ಕಾರ ಕುರುಡಾಗಿದೆಯೋ ಕಿವುಡಾಗಿದೆಯೋ ಅಥವಾ ನಿರ್ವೀರ್ಯವಾಗಿದೆಯೋ ನನಗೆ ಗೊತ್ತಿಲ್ಲ. ಕಾದಿಟ್ಟ ಅರಣ್ಯ ಪ್ರದೇಶದಲ್ಲಿ ಒಂದು ಸಾವಿರ ಹೆಕ್ಟೇರ್ ಭೂಮಿಯನ್ನು ಸತತವಾಗಿ ಆರು ವರ್ಷಗಳಿಂದ ಅಕ್ರಮವಾಗಿ ತಮಿಳುನಾಡಿನವರು ಮತ್ತು ನಮ್ಮವರು ಎಲ್ಲರೂ ಸೇರಿಕೊಂಡು ಸಾಗುವಳಿ ಮಾಡುತ್ತಿದ್ದಾರೆ. ಇದನ್ನು ತೆರವು ಮಾಡಲಿಕ್ಕೆ ಇನ್ನೂ ಕೂಡ ಸರ್ಕಾರ ಮನಸ್ಸು ಮಾಡಿಲ್ಲ. ನಿರ್ದಿಷ್ಟವಾದ ಉತ್ತರ ಇಲ್ಲ. ಪ್ರತ್ಯೇಕ ಪೊಲೀಸ್ ಸಿಬ್ಬಂದಿಯನ್ನು ಒದಗಿಸುವ ಪ್ರಸ್ತಾವನೆ ಕಳುಹಿಸಿದ್ದೇವೆಂದು ಹೇಳಿದ್ದಾರೆ. ಈ ಸರ್ಕಾರಕ್ಕೆ ಏನು ಹೇಳಬೇಕಾಗುತ್ತದೆ. ಸಾಮಾನ್ಯವಾಗಿ ರಸ್ತೆಯಲ್ಲಿರತಕ್ಕ ಮರ ಕಡಿದರೆ ಅವರನ್ನು ತೆಗೆದುಕೊಂಡು ಹೋಗಿ ಜೀಲಿಗೆ ಹಾಕುತ್ತೀರಿ. 1 ಸಾವಿರ ಹೆಕ್ಟೇರ್ ಕಾದಿಟ್ಟ ಅರಣ್ಯ ಪ್ರದೇಶದಲ್ಲಿ ಆರು ವರ್ಷಗಳಿಂದ ವ್ಯವಸಾಯ ಮಾಡಿಕೊಂಡು ಬರುತ್ತಿದ್ದಾರೆ. ನೀವು ಕಿವುಡಾಗಿದ್ದೀರೋ ಕಣ್ಣಿಲ್ಲವೋ ಹೇಳಿ. ಯಾವಾಗ ತೆರವು ಮಾಡಲಿಕ್ಕೆ ಸಾಧ್ಯವಾಗುತ್ತದೆ ಎಂದು ನಿರ್ದಿಷ್ಟವಾಗಿ ಹೇಳಿ.

ಶ್ರೀ ಹೆಚ್. ವಿಶ್ವನಾಥ್ : ಅಧ್ಯಕ್ಷರೆ, ಸರ್ಕಾರಕ್ಕೆ ಕಣ್ಣೂ ಇದೆ. ಕಾಲೂ ಇದೆ. ಕಣ್ಣು ಕಾಲು ಸಮೇತ 23ನೇ ತಾರೀಖು 6ನೇ ತಿಂಗಳಲ್ಲಿ ಶಾಸಕರ ಸಮೇತ ನಾನು ಹೋಗಿ ಅಲ್ಲಿ ಭೇಟಿ ಕೊಟ್ಟು ಸಂಬಂಧಪಟ್ಟ ಅಧಿಕಾರಿಗಳ ಜೊತೆ, ಪೊಲೀಸ್ ಅಧಿಕಾರಿಗಳ ಜೊತೆ ಚರ್ಚೆ ಮಾಡಿದ್ದೇನೆ. ಆದರೆ ವೀರಪ್ಪನ್ ಆಪರೇಷನ್‌ನಲ್ಲಿ ಇದ್ದುದರಿಂದ 1991ರಿಂದ 1993ರವರೆಗೆ ನಮಗೆ ಸ್ವಲ್ಪ ಪ್ರಾಬ್ಲಂ ಇತ್ತು. ಈಗ ಅಂಥದ್ದು ಏನೂ ಇಲ್ಲ. ನಾನು ಬೇಕಾದರೆ ಸಿ.ಆರ್.ಪಿ. ಕೂಡ ಅಲ್ಲಿ ಕೊಡುವುದಕ್ಕೆ ತಯಾರಿದ್ದೇನೆ. ಅಧಿಕಾರಿಗಳು ಕೂಡ ಸಜ್ಜಾಗಿದ್ದಾರೆ. ನಾನು ಶಾಸಕರ ವಿಶ್ವಾಸವನ್ನು ಕೂಡ ತೆಗೆದುಕೊಂಡು ಏನು ಅಕ್ರಮವಾಗಿದೆ ಅದನ್ನು ಸದ್ಯದಲ್ಲೇ ತುರ್ತಾಗಿ ತೆರವು ಮಾಡಿಸುವುದಕ್ಕೆ ಎಲ್ಲಾ ಕ್ರಮವನ್ನೂ ಕೂಡ ತೆಗೆದುಕೊಳ್ಳುತ್ತೇನೆಂದು ಅವರಿಗೆ ಆಶ್ವಾಸನೆ ಕೊಡುತ್ತೇನೆ.

ಶ್ರೀ ಜಿ. ರಾಜುಗೌಡ : ಸ್ವಾಮಿ, 6 ವರ್ಷಗಳಿಂದ ಇದು ಸತತವಾಗಿ ನಡೆಯುತ್ತಿದೆ; ನಿರಂತರವಾಗಿ ನಡೆಯುತ್ತಿದೆ. ಇಂಥದ್ದನ್ನು ಸರ್ಕಾರ ಮಾಡಲಿಲ್ಲ ಎಂದರೆ ಏನು ಸ್ವಾಮಿ ಅರ್ಥ? ಪೊಲೀಸಾದರೂ ತೆಗೆದುಕೊಂಡು ಬನ್ನಿ, ಸೈನ್ಯವಾದರೂ ತೆಗೆದುಕೊಂಡು ಬನ್ನಿ. ಆದರೆ ನಿರ್ದಿಷ್ಟವಾಗಿ ಯಾವಾಗ ತೆರವು ಮಾಡಿಸುತ್ತೀರಿ ಎಂಬುದನ್ನು ದಯಮಾಡಿ ಹೇಳಿ. ನಿಮ್ಮಲ್ಲೇ ಬೇಕಾದಷ್ಟು ಜನರಿದ್ದಾರೆ. 12 ಜನ ಡಿಸಿಎಫ್, 50 ಜನ ಎ.ಸಿ.ಎಫ್. ಗಾರ್ಡ್‌ಗಳು ಇವರೆಲ್ಲಾ ಸೇರಿ ನಿಮ್ಮದೇ ಒಂದು ಸೈನ್ಯ ಇದೆ. ಅದಕ್ಕಿಂತ ಮತ್ತೊಂದು ಸೈನ್ಯ ಬೇಕೇ? ತೆರವು ಮಾಡಲು ಇಚ್ಛೆ ಇಲ್ಲದಿದ್ದರೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸರ್ಕಾರವೂ ಇದರಲ್ಲಿ ಶಾಮೀಲಾಗಿದೆ ಎಂದು ಹೇಳುವಂಥ ಸನ್ನಿವೇಶ ಬಂದಿದೆ. ದಯಮಾಡಿ ದಿವಸವೇ ಮಾಡಬೇಕು ಎಂದು ಹೇಳಿ. ತಮಿಳುನಾಡಿನವರು ಬರುತ್ತಿದ್ದಾರೆ. ಆದರೂ ನೀವು ಸುಮ್ಮನೆ ಕುಳಿತಿದ್ದೀರಲ್ಲ.

ಶ್ರೀ ಹೆಚ್. ವಿಶ್ವನಾಥ್ : ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ತೆರವು ಮಾಡುವ ವಿಚಾರದಲ್ಲಿ ಮತ್ತು ಏನು ಬೆಳೆ ಬೆಳೆಯಬೇಕು ಆ ಬೆಳೆ ನೆಡುವಂಥ ವಿಚಾರದಲ್ಲಿ ಕಟ್ಟಪ್ಪಣೆ ಮಾಡಿದ್ದೇವೆ. ಅದಕ್ಕೂ ಕೂಡ ಅವಕಾಶ ಕೊಡುವುದಿಲ್ಲ. ಅಂದರೆ ಸರ್ಕಾರ ಈಗಾಗಲೇ ಕ್ರಮ ತೆಗೆದುಕೊಳ್ಳುತ್ತಿದೆ. ಬೆಳೆ ಕೂಡ ಬೆಳೆಯುವುದಕ್ಕೆ ಬಿಡುತ್ತಿಲ್ಲ ಎಂಬುದು ಶಾಸಕರಿಗೂ ಗೊತ್ತಿರತಕ್ಕ ವಿಚಾರ. ಈ ಸಾರಿ ಬೆಳೆ ಬೆಳೆಯಲಿಲ್ಲ ಎಂದರೆ ನಾವು ಅದನ್ನು ಅದನ್ನು ತೆರವು ಮಾಡೇ ಮಾಡುತ್ತೇವೆ ಎಂಬುದು ಕೂಡ ಅವರಿಗೆ ಗೊತ್ತಿದೆ. ತುರ್ತಾಗಿ ನಾವು ತೆರವು ಮಾಡುವುದಕ್ಕೆ ಸರ್ವಕ್ರಮಗಳನ್ನೂ ಅವರ ಜೊತೆ ಸೇರಿ ತೆಗೆದುಕೊಳ್ಳುತ್ತೇವೆ ಎಂದು ಮತ್ತೊಮ್ಮೆ ಅವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಜಿ. ರಾಜುಗೌಡ : ಸ್ಪಷ್ಟವಾದ ಧೋರಣೆ ಸರ್ಕಾರದಲ್ಲಿಲ್ಲ. ಮುಚ್ಚುಮರೆ ಏನಿಲ್ಲ ಇದರಲ್ಲಿ. ಪೋಲೀಸರ ಸಹಾಯ ತೆಗೆದುಕೊಳ್ಳಬೇಕಾದ ಪರಿಸ್ಥಿತಿ ಇದೆ ಎಂದರೆ ತಾವು ದೃಢನಿರ್ಧಾರ ಮಾಡಿದ್ದೀರಾ. ಯಾವಾಗ ತೆರವು ಮಾಡಿಸುತ್ತೀರಿ ಹೇಳಿ. ನಾನು ಕೇಳುವುದು ಇಷ್ಟೆ. ದಯಮಾಡಿ ಬಿತ್ತನೆ ಕಾರ್ಯ ನಿಲ್ಲಿಸುವ ವ್ಯವಸ್ಥೆ ಮಾಡುತ್ತೀರಾ? ಖಾಯಂ ಆಗಿ ಶಿಬಿರ ವಿಸರ್ಜಿಸಿ. ಆ ಕೆಲಸ ನೀವು ಮಾಡುತ್ತಿಲ್ಲ. ಯಾವಾಗ ಮಾಡುತ್ತೀರಿ ಹೇಳಿ.

ಶ್ರೀ ಹೆಚ್. ವಿಶ್ವನಾಥ್ : ಮಾಡುತ್ತೇವೆ.

ಶ್ರೀ ಜಿ. ರಾಜುಗೌಡ : ಯಾವಾಗ ಮಾಡುತ್ತೀರಿ?

ಶ್ರೀ ಹೆಚ್. ವಿಶ್ವನಾಥ್ : ಸರ್ಕಾರ ನಿರ್ಧಾರ, ದೃಢನಿರ್ಧಾರ, ಗಟ್ಟಿ ನಿರ್ಧಾರ ಎಲ್ಲ ನಿರ್ಧಾರಗಳನ್ನೂ ತೆಗೆದುಕೊಂಡಿದೆ.

ಎಸ್.ಎಸ್.ಎಲ್.ಸಿ. ಪರೀಕ್ಷಾ ಮಂಡಳಿಯಲ್ಲಿ ಕಾರ್ಯದ ಒತ್ತಡ

390 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಎಸ್ಎಸ್ಎಲ್ಸಿ ಪರೀಕ್ಷೆಗಾಗಿ ಸುಮಾರು 6 ಲಕ್ಷ ಅಭ್ಯರ್ಥಿಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಎಸ್ಎಸ್ಎಲ್ಸಿ ಪರೀಕ್ಷೆಯಲ್ಲಿ 1 ಲಕ್ಷಕ್ಕಿಂತಲೂ ಹೆಚ್ಚು ಅಭ್ಯರ್ಥಿಗಳು ಇದ್ದರೆ ಇನ್ನೊಂದು ಪರೀಕ್ಷಾ ಮಂಡಳಿ ಕೇಂದ್ರವನ್ನು ವಿರ್ಪಾಡು ಮಾಡಬೇಕೆಂದು ಕಾನೂನು ಇರುವುದು ನಿಜವೇ?

ಇ) ನೆರೆಯ ರಾಜ್ಯಗಳಾದ ಮಹಾರಾಷ್ಟ್ರ, ತಮಿಳುನಾಡು, ಆಂಧ್ರಪ್ರದೇಶಗಳಲ್ಲಿ ಬೇರೆ ಬೇರೆ ವಿಭಾಗಗಳಲ್ಲಿ ಬೇರೆ ಬೇರೆ ಕೇಂದ್ರಗಳಲ್ಲಿ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಟ್ಟಿಲ್ಲವೇ?

ಈ) ಒಬ್ಬ ಅಭ್ಯರ್ಥಿ ಗುಲ್ಬರ್ಗಾ, ಬೀದರ್, ರಾಯಚೂರು ಬೆಳಗಾಂದಿಂದ ಅಂಕಪಟ್ಟಿ ಕಳೆದರೆ ಪರೀಕ್ಷಾ ಕೇಂದ್ರ ಬೆಂಗಳೂರಿಗೆ ಬರಬೇಕಾದರೆ ಬೆಂಗಳೂರಿಗೆ ಬಂದು ಹೋಗಲು ಕನಿಷ್ಟ 1000-00 ರೂ. ವೆಚ್ಚವಾಗುವುದು ಬಡರೈತರು ಭರಿಸಬಹುದೇ?

ಉ) ಇದರಿಂದ ಆ ಹಿಂದುಳಿದ ಭಾಗದ ಸಾವಿರಾರು ವಿದ್ಯಾರ್ಥಿಗಳ ವಿದ್ಯಾಭ್ಯಾಸವೇ ಸ್ಥಗಿತಗೊಳ್ಳುವುದಿಲ್ಲವೇ?

ಊ) ಅದಕ್ಕಾಗಿ ಗುಲ್ಬರ್ಗಾ ಬೆಳಗಾಂ ಧಾರವಾಡ ವಿಭಾಗಗಳಲ್ಲಿ ಎಸ್ಎಸ್ಎಲ್ಸಿ ಪರೀಕ್ಷೆ ಕೇಂದ್ರ ಮಂಡಳಿಗಳನ್ನು ವಿರ್ಪಾಡು ಮಾಡಿ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಳ್ಳಲು ಸೂಕ್ತ ಕ್ರಮ ಕೈಗೊಳ್ಳಲಾಗುವುದೇ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು) :

ಅ) ಬಂದಿದೆ

ಆ) ಇಲ್ಲ

ಇ) ಮಾಹಿತಿ ಲಭ್ಯವಿಲ್ಲ

ಈ) ಅಂಕಪಟ್ಟಿ ಕಳೆದುಕೊಂಡಂತಹ ವಿದ್ಯಾರ್ಥಿಗಳು ನಿಗಧಿತ ಶುಲ್ಕವನ್ನು ಮತ್ತು ಅರ್ಜಿಯನ್ನು ಸಂಬಂಧಿಸಿದ ಶಾಲೆಯ ಮುಖಾಂತರ ಮಂಡಳಿಗೆ ಕಳುಹಿಸಿದಲ್ಲಿ ಅಂತಹವರಿಗೆ ನಕಲು ಅಂಕಪಟ್ಟಿಯನ್ನು ಸಂಬಂಧಿಸಿದ ಶಾಲೆಗೆ ಕಳುಹಿಸಲಾಗುತ್ತದೆ. ಆದ್ದರಿಂದ ವಿದ್ಯಾರ್ಥಿಗಳು ಬೆಂಗಳೂರಿಗೆ ಬರುವ ಅವಶ್ಯಕತೆ ಇಲ್ಲ.